# ವನಮಹೋತ್ಸವ 2023

## ~ ಗಿಡನೆಡುವ ಕಾರ್ಯಕ್ರಮ ~

### ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಮತ್ತು ಅರಣ್ಯ ಇಲಾಖೆ, ಮಂಗಳೂರು

### ಇದರ ಜಂಟಿ ಆಶ್ರಯದಲ್ಲಿ

### ದಿನಾಂಕ: 7ನೇ ಜುಲೈ, 2023

### ಸ್ಥಳ: ಗುತ್ತುಮನೆ ಪರಿಸರ, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ

PDA-Forest Dept.

ದಿನಾಂಕ: 07/07/2023 ರಂದು ಪಿಲಿಕುಳದ ಗುತ್ತಿನ ಮನೆಯ ಪರಿಸರದಲ್ಲಿ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ, ಮಂಗಳೂರು ಮತ್ತು ಅರಣ್ಯ ಇಲಾಖೆ, ಮಂಗಳೂರು ಇದರ ಜಂಟಿ ಆಶ್ರಯದಲ್ಲಿ ಗಿಡನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ನೆಡಲು ಬೇಕಾದ 50 ಗಿಡಗಳನ್ನು ಅರಣ್ಯ ಇಲಾಖೆ, ಮಂಗಳೂರು ಇವರು ಒದಗಿಸಿರುತ್ತಾರೆ. ಮಂಗಳೂರು ವಲಯ ಅರಣ್ಯಾಧಿಕಾರಿ ಶ್ರೀ ಪ್ರಶಾಂತ್ ಪೈ ಇವರು ಒಂದು ಗಿಡವನ್ನು ಸಾಂಕೇತಿಕವಾಗಿ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ಶ್ರೀ ಅಭಿಷೇಕ್ ವಿ. ಇವರಿಗೆ ಹಸ್ತಾಂತರಿಸಿದರು.

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ಶ್ರೀ ಅಭಿಷೇಕ್ ವಿ. ಇವರು ಸಂಪಿಗೆ ಗಿಡವನ್ನು ನೆಡುವ ಮೂಲಕ ಗಿಡನೆಡುವ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಂಗಳೂರು ವಲಯ ಅರಣ್ಯಾಧಿಕಾರಿ ಶ್ರೀ ಪ್ರಶಾಂತ್ ಪೈ, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಬೊಟನಿ ವಿಭಾಗದ ಪ್ರಧಾನ ವಿಜ್ಞಾನಿ ಡಾ.ಹೆಚ್.ಸೂರ್ಯಪ್ರಕಾಶ್ ಶೆಣೈ, ವೈಜ್ಞಾನಿಕ ಅಧಿಕಾರಿ ಶ್ರೀ ರಾಮಕೃಷ್ಣ ಮರಾಟಿ, ಕ್ಷೇತ್ರ ಸಹಾಯಕ ಶ್ರೀ ರವಿ, ತೋಟಗಾರಿಗೆ ವಿಭಾಗದ ಸಹಾಯಕರಾದ ಶ್ರೀ ರೋಶನ್ ಮತ್ತಿತರರು ಭಾಗವಹಿಸಿದ್ದರು.



ಆಯುಕ್ತರಾದ ಶ್ರೀ ಅಭಿಷೇಕ್ ವಿ. ಇವರಿಂದ ಗಿಡನೆಡುವ ಕಾರ್ಯಕ್ರಮಕ್ಕೆ ಚಾಲನೆ



ಶ್ರೀ ಅಭಿಷೇಕ್ ವಿ. ಇವರೊಡನೆ ಶ್ರೀ ಪ್ರಶಾಂತ್ ಪೈ ಯವರು ಗಿಡಕ್ಕೆ ನೀರೆರೆಯುವುದು





ಮಂಗಳೂರು ವಲಯ ಅರಣ್ಯಾಧಿಕಾರಿ ಶ್ರೀ ಪ್ರಶಾಂತ್ ಪೈ ಇವರಿಂದ ಗಿಡಗಳ ಹಸ್ತಾಂತರ